# ಹೇಗೆ ಮೆಚ್ಚಿಸಲಿ ಹೇಗೆ ಅರ್ಚಿಸಲಿ ನಿನ್ನ

1. **Ref.:** Dasara Padagalu – Purandara Dasara Keerthane, Vol 2, Edited by Shri Pavanje Gururao, Sriman Madhwa Siddantha Granthalaya, Udupi, page No. 620.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 118.
3. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 31.
4. **Note:** The lyrics given in yellow highlights are as per Ref. 1 and are almost similar to that of the singer. The lyrics given without highlights are as per Ref. 2.

ರಾಗ: ಶಂಕರಾಭರಣ ತಾಳ: ತ್ರಿಪುಟ

| | |
|---|---|
| ಹ್ಯಾಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ | ಹೇಗೆ ಅರ್ಚಿಸಲಿ ಮೆಚ್ಚಿಸಲಿ ನಿನ್ನ |
| ನಾಗಶಯನನೆ ನಾರದ ವಂದ್ಯನೇ ದೇವಾ ‖ ಪ ‖ | ನಾಗಶಯನ ನಾರದ ವಂದಿತನೆ ದೇವಾ |
| | |
| ಮಂಗಳಾಭಿಷೇಕಕೆ ಉದಕ ತರುವೆನೆನೆ | ಮಂಗಳಾಭಿಷೇಕಕೆ ಉದಕ ತರುವೆನೆನೆ |
| ಗಂಗೆಯಂಗುಷ್ಟದಿ ಪಡೆದಿರುವೇ | ಗಂಗೆಯ ಅಂಗುಟದಿ ಪಡೆದಿಹೆಯೊ |
| ಸಂಗೀತ ಕೀರ್ತನೆ ಪಾಡುವೆನೆಂದರೆ | ಸಂಗೀತ ಕೀರ್ತನೆ ಪಾಡುವೆನೆಂದರೆ |
| ತುಂಬುರು ನಾರದರು ಪಾಡುತಿಹರೋ ದೇವ ‖ 1 ‖ | ತುಂಬುರು ನಾರದರು ಪಾಡುವರೊ |
| | |
| ಪುಷ್ಪವ ತಂದು ನಿನಗರ್ಪಿಸುವೆನೆಂದರೆ | ಪುಷ್ಪವ ತಂದು ನಿನಗರ್ಪಿಸುವೆನೆಂದರೆ |
| ಪುಷ್ಪ ಪಲ್ಲವಿಸಿದೆ ಹೊಕ್ಕುಳಲಿ | ಪುಷ್ಪ ಪುಲ್ಲಾಯಿಸಿದೆ ಹೊಕ್ಕುಳಲಿ |
| ಇಪ್ಪತ್ತೆತ್ತಿಸಕೋಟಿ ದೇವರ್ಕಳದ | ಮುಪ್ಪತ್ತು ಮೂರ್ಕೋಟಿ ದೇವತೆಗಳು ನಿನ- |
| ನೊಪ್ಪಿ ನೈವೇದ್ಯ ನೀಡಲು ತೃಪ್ತನಾಗುವೆ ‖ ೨ ‖ | ಗೊಪ್ಪಯಿಸೆ ನೈವೇದ್ಯ ನಿತ್ಯ ತೃಪತನು ನೀನು |
| | |
| ಕೋಟಿ ಸೂರ್ಯರ ಪ್ರಭೆ ಮಿಗಿಲಾದಾತನಿಗೆಂದು | ಕೋಟಿ ಸೂರ್ಯರ ಕಾಂತಿ ಮಿಗಿಲಾದವನಿಗೊಂದು |
| ದೀಪವನು ಹಚ್ಚಿದರೆ ಬೆಳಕಹುದೇ | ಮೋಟು ದೀವಿಗೆ ಬೆಳಗೆ ಬೆಳಕಹುದೆ |
| ಸಾಟಿಗಾಣದೆ ಲಕ್ಷ್ಮಿ ಉರಸ್ಥಳವಾಗಿರೆ | ಸಾಟಿಗಾಣದ ಸಿರಿ ಉದರದೊಳು ನೆಲಸಿರೆ |
| ಲೋಷ್ಟ ಕಾಸು ಎಂತು ಕಾಣಿಕೆ ನೀಡೆಲೋ ‖ ೩ ‖ | ಪೋಟುಗಾಸನು ಎಂತು ಕಾಣಿಕೆಯಿಡಲಯ್ಯ |
| | |
| ಹಾಸಿಗೆಯನು ತಂದು ಹಾಸುವೆನೆಂದರೆ | ಹಾಸಿಗೆಯನು ನಿನಗೆ ಹಾಸುವೆನೆಂದರೆ |
| ಶೇಷನ ಮ್ಯಾಲೆ ನೀ ಪವಡಿಸಿರ್ಪೆ | ಶೇಷನ ಮೈ ಮೇಲೆ ಪವಡಿಸಿಹೆ |
| ಬೀಸಣಿಗೆಯ ತಂದು ಬೀಸುವೆನೆಂದರೆ | ಬೀಸಣಿಗೆಯ ತಂದು ಬೀಸುವೆನೆಂದರೆ |

| | |
|---|---|
| ಬೀಸುತಿಹನು ಖಗ ತನ್ನ ಪಕ್ಕದಲೀ ‖ ೪ ‖ | ಅಸಮೀರಣ ಚಾಮರವ ಬೀಸುತಿಹನೋ |
| | |
| ನಿತ್ಯ ಗುಣಾರ್ಣವ ನಿಜಗುಣ ಪರಿಪೂರ್ಣ | ನಿತ್ಯ ಗುಣಾರ್ಣವ ನಿಜ ಸುಖ ಪರಿಪೂರ್ಣ |
| ಸಚ್ಚಿದಾನಂದ ಸನಕಾದಿವಂದ್ಯ | ಸತ್ತು ಚಿತ್ತಾನಂದ ಸನಕಾದಿವಂದ್ಯ |
| ಮುಕ್ತಿದಾಯಕ ನಮ್ಮ ಪುರಂದರ ವಿಠಲ | ಮುಕ್ತಿದಾಯಕ ನಮ್ಮ ಪುರಂದರ ವಿಠಲನು |
| ಭಕ್ತಿದಾಯಕನೆಂದು ಸ್ತುತಿಸಿ ಕೊಂಡಾಡುವೆನೋ ‖ ೫ ‖ | ಭಕ್ತಿ ಪ್ರಿಯನು ಎಂದು ಭಜಿಸಿ ಕೊಂಡಾಡುವೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಒಪ್ಪಿಸು** = ಸಮರ್ಪಿಸು

**ಮೋಟು ದೀವಿಗೆ** = ಕುರುಡು ದೀವಿಗೆ

**ಪೋಟು ಕಾಸು** = ಒಡಕು ಬಿಲ್ಲಿ

**ಸಮೀರಣ** = ವಾಯು ದೇವರು

**ನಿತ್ಯ ಗುಣಾರ್ಣವ** = ಅನಾದ್ಯನಂತ ಗುಣಗಳುಳ್ಳ

**ನಿಜ ಸುಖ ಪರಿಪೂರ್ಣ** = ಆತ್ಮ ತೃಪ್ತ

**Classification:** Keerthane
**Ankita:** purandara vittala
**Location:** NA
**Category:** Vishnu Stuti, Bhakti, Pooja Tatva
**Sub-Category:** Vishnu, archane, narada, deva, mangala, abhisheka, gange, sangeetha, naivedya, surya, deepa, Lakshmi, rokka, hasige, shesha, purna, mukti, sukha, pushpa, sanaka, bhajane,
**Pravachana:** Vyasa Vidya Vahini
**Explanation:** Dr. Vijayendra Desai, Dharwad.